


ಸಂಪುಟ ೨, ಸಂಚಿಕೆ ೧, January 2012

Kannada Sangha (Singapore)'s registration number (UEN): S96SS0171F

Kannada Sangha (Singapore) | Robinson Road Post Office | PO Box 984 | Singapore | 901934 | Singapore

Visit www.singara.org

# ಸಿಂಚನ

## ಈ ಸಂಚಿಕೆಯಲ್ಲಿ...


| | |
|---|---|
| ಸಂಪಾದಕೀಯ | 1 |
| ಚಿಂತನ ಚಾವಡಿ | 2 |
| ತಿಂಗಳ ವ್ಯಕ್ತಿ | 2 |
| ಇವರು ಯಾರು ಬಲ್ಲಿರೇನು? | 3 |
| ಪದ ಪಂದ್ಯ | 3 |
| ಮುನ್ನೋಟ | 4 |
| ಹಿನ್ನೋಟ | 4 |
| ಪರಿಚಯ | 5 |
| ನಮ್ಮ ಕರ್ನಾಟಕ | 5 |
| ಸಿಂಗನ್ನಡ ಸುಧೆ | 6 |


ಸಿಂಚನ - ಸಂಪಾದಕ ಸಮಿತಿ:

ಸುರೇಶ್.ಹೆಚ್.ಸಿ.

(ಪ್ರಧಾನ ಸಂಪಾದಕ)

ಗಿರೀಶ್ ಜಮದಗ್ನಿ,

ವಸಂತ ಕುಲಕರ್ಣಿ,

ಪತ್ರಿಕೆ ವಿನ್ಯಾಸ

ಗಿ.ಜ.

ಮಾಸಿಕ ಪತ್ರಿಕೆ ಸಂಪರ್ಕ :

newsletter@singara.org

## ಸಂಪಾದಕೀಯ




### ಸಿಂಚನದ ಓದುಗರೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು



ಸ್ಥಳೀಯರಿಗೆ ಕ್ರಿಸ್‌ಮಸ್ ಹಬ್ಬ ಮುಗಿಸಿ ಹೊಸವರ್ಷ ಹಾಗೂ "Chinese New Year (Lunar New Year)"ವನ್ನು ಎದುರುಗೊಳ್ಳುವ ಸಂಭ್ರಮ. ಸಿಂಗಪುರದಲ್ಲಿ ರಸ್ತೆ, ವಾಣಿಜ್ಯ ಮಳಿಗೆಗಳು ಬಣ್ಣ-ಬೆಳಕುಗಳಿಂದ ಜಗಮಗಿಸುತ್ತಿವೆ. ರಜೆಗಳು ಮುಗಿದು ಹಿರಿಯರು ಪುನಃ ಆಫೀಸಿಗೆ, ಮಕ್ಕಳು ಪುನಃ ಶಾಲೆಗೆ ಹೊರಡಲು ಸಜ್ಜಾಗುತ್ತಿದ್ದಾರೆ. ಹೊಸ ವರ್ಷದ ಆರಂಭದಲ್ಲಿ ಈ ವರ್ಷ ನಾವು ಏನು ಮಾಡಬೇಕು, ನಮ್ಮ ವೈಯುಕ್ತಿಕ ಗುರಿಗಳೇನು, ಅದನ್ನು ಹೇಗೆ ಸಾಧಿಸಬೇಕು ಇತ್ಯಾದಿ ಯೋಚಿಸಿ ನಿರ್ಧರಿಸುವುದು ಸಾಮಾನ್ಯ. ಈ ವೈಯುಕ್ತಿಕ ಗುರಿಯ ಜೊತೆಗೇ ನಮ್ಮ ಸಾಮಾಜಿಕ ಜವಾಬ್ದಾರಿಗಳೇನು ಎಂಬುದರ ಬಗ್ಗೆಯೂ ನಾವೆಲ್ಲರೂ ಸ್ವಲ್ಪ ಯೋಚಿಸೋಣ.

ಮೊದಲಿಗೆ ನಾವು ಸಾಮಾನ್ಯ ಸದಸ್ಯರಾಗಿದ್ದರೆ ನಮ್ಮ ವಾರ್ಷಿಕ ಸದಸ್ಯತ್ವವನ್ನು ನವೀಕರಿಸಿಕೊಳ್ಳೋಣ. ಸಾಧ್ಯವಾದರೆ ಆಜೀವ ಸದಸ್ಯತ್ವವನ್ನು ಪಡೆದುಕೊಳ್ಳೋಣ. ಸಂಘದ ಕಾರ್ಯಕ್ರಮಗಳಲ್ಲಿ ನಿರ್ದೇಶಕರಾಗಿ, ಕಲಾವಿದರಾಗಿ, ಲೇಖಕರಾಗಿ, ಸ್ವಯಂಸೇವಕರಾಗಿ ಅಥವಾ ಕಡೇ ಪಕ್ಷ ಪ್ರೇಕ್ಷಕರಾಗಿ ಸಕುಟುಂಬವಾಗಿ ಭಾಗವಹಿಸೋಣ.ಸಂಘದ ಕಾರ್ಯಕ್ರಮಗಳ ಬಗ್ಗೆ ನಮ್ಮ ವಸ್ತುನಿಷ್ಠವಾದ ಅಭಿಪ್ರಾಯ ಹಾಗೂ ಸಲಹೆ ಸೂಚನೆ ನೀಡೋಣ. ಸಂಘ ನಮಗೆ ಏನು ಮಾಡಿದೆ, ಸಂಘದಿಂದ ನಮಗೇನು ಲಾಭ ಎಂದು ಯೋಚಿಸುವ ಬದಲು ನಮ್ಮ ಮಾತೃಭಾಷೆಯಾದ ಕನ್ನಡಕ್ಕಾಗಿ ನಾವೇನು ಮಾಡಬಲ್ಲೆವು, ನಮ್ಮ ಕನ್ನಡ ಸಂಘಕ್ಕೆ ನಾವು ಯಾವ ರೀತಿ ಸೇವೆ ಸಲ್ಲಿಸಬಲ್ಲೆವು ಎಂದು ಯೋಚಿಸಿ, ಕಾರ್ಯತತ್ಪರರಾಗೋಣ.

## ಚಿಂತನ ಚಾವಡಿ: ಗುರುವೆಂಬ ದೇವರು! – ವಸಂತ ಕುಲಕರ್ಣಿ

ವಿಖ್ಯಾತ ಉಪನ್ಯಾಸಕರೊಬ್ಬರು ದಶಕಗಳ ನಂತರ ತಾವು ಕಲಿತ ಶಾಲೆಯಲ್ಲಿ ಅತಿಥಿಯಾಗಿ ಉಪನ್ಯಾಸ ನೀಡಲು ಹೋದರಂತೆ. ಆಗ ಅವರಿಗೆ ಕಲಿಸಿದ ಪ್ರಾಥಮಿಕ ಶಿಕ್ಷಕರೊಬ್ಬರು ಪರಿಚಯ ಭಾಷಣ ಮಾಡುತ್ತಾ, ಭಾಗಶಃ ಪ್ರಶಂಸೆ ಮತ್ತು ಭಾಗಶಃ ನಿರಾಶೆಯಿಂದ "ನನ್ನಿಂದ ತಮ್ಮ ಮೊದಲ ಪಾಠಗಳನ್ನು ಕಲಿತ ಶ್ರೀಯುತರು ಇಂದು ವಿಖ್ಯಾತ ಉಪನ್ಯಾಸಕರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಬಹಳ ಎತ್ತರವನ್ನೇರಿದ ಇವರು ನನ್ನ ಶಿಷ್ಯರು ಎಂದು ಹೆಮ್ಮೆಯಾಗುತ್ತದೆ. ಆದರೆ ನಾನು ಮಾತ್ರ ಇಲ್ಲಿಯೇ ಉಳಿದುಕೊಂಡಿದ್ದೀನಲ್ಲಾ ಎಂದು ಅನಿಸುತ್ತದೆ" ಎಂದರಂತೆ.

ತದನಂತರ ಉಪನ್ಯಾಸಕರು ತಮ್ಮ ಉಪನ್ಯಾಸ ನೀಡುತ್ತ ಆ ಶಿಕ್ಷಕರನ್ನುದ್ದೇಶಿಸಿ ಹೀಗೆ ಹೇಳಿದರಂತೆ. "ಗುರುಗಳೇ, ನೀವು ಅಲ್ಲಿ ಇದ್ದು ನಮಗೆ ಮಾರ್ಗದರ್ಶನ ಮಾಡಿದುದರಿಂದಲೇ, ಇವತ್ತು ನನಗೆ ಈ ಎತ್ತರವನ್ನೇರಲು ಸಾಧ್ಯವಾಯಿತು" ಎಂದು ಹೇಳಿದರಂತೆ. ಎಂತಹ ಸತ್ಯವಾದ ಮಾತು? ಉತ್ತಮ ಗುರುಗಳ ಮಾರ್ಗದರ್ಶನದಿಂದ ತಾನೇ ನಮ್ಮೆಲ್ಲರ ಜೀವನ ರೂಪುಗೊಳ್ಳುವುದು? ಮಹಾ ಮಹಿಮ ಗುರುಗಳಿಂದ ತಾನೇ ಅನೇಕ ಮಹಾ ಚೇತನಗಳ ಜೀವನ ವಿಕಾಸಗೊಂಡಿದ್ದು?

(ಎರಡನೇ ಪುಟಕ್ಕೆ)







## ಚಿಂತನ ಚಾವಡಿ: (ಮೊದಲನೇ ಪುಟದಿಂದ)

ಶಿವಾಜಿ ಮಹಾರಾಜರು ತಮ್ಮ ಗುರುಗಳಾದ ಸ್ವಾಮಿ ಸಮರ್ಥರು ತೋರಿದ ದಾರಿಯಲ್ಲಿ ನಡೆದುದರಿಂದ ತಾನೇ, ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ಸಾಮ್ರಾಜ್ಯ ಕಟ್ಟಲು ಸಾಧ್ಯವಾದದ್ದು? ಚಂದ್ರಗುಪ್ತ ಮೌರ್ಯ ಅಖಂಡ ಭಾರತದ ಮೊದಲ ಚಕ್ರವರ್ತಿಯಾದದ್ದು ಗುರು ಚಾಣಕ್ಯರ ಮಾರ್ಗದರ್ಶನದಿಂದಲ್ಲವೇ? ಅದರಂತೆಯೇ ಸ್ವಾಮಿ ವಿವೇಕಾನಂದರಿಗೆ ರಾಮಕೃಷ್ಣ ಪರಮಹಂಸರು, ಅರ್ಜುನನಿಗೆ ಶ್ರೀಕೃಷ್ಣ ಪರಮಾತ್ಮ, ಬಸವಣ್ಣನಿಗೆ ಅಲ್ಲಮಪ್ರಭು, ಹರಿಹರ ಮತ್ತು ಬುಕ್ಕರಾಯರಿಗೆ ಶ್ರೀ ವಿದ್ಯಾರಣ್ಯರಂತಹ ಗುರುಗಳಿದ್ದುದರಿಂದಲ್ಲವೇ ಅವರು ಅಂತಹ ಮಹೋನ್ನತಿಯನ್ನು ಪಡೆಯಲು ಸಾಧ್ಯವಾದುದು?

ಸ್ವಾಮಿ ವಿವೇಕಾನಂದರು ಗುರುವನ್ನು ಒಬ್ಬ ಸಮರ್ಥ ತೋಟಗಾರನಿಗೆ ಹೋಲಿಸಿದ್ದಾರೆ. ಹೇಗೆ ಒಬ್ಬ ಸಮರ್ಥ ತೋಟಗಾರ ಮಣ್ಣನ್ನು ಹದಗೊಳಿಸಿ, ನೀರು ಮತ್ತು ಗೊಬ್ಬರ ಕೊಟ್ಟು, ಬೇಲಿಯನ್ನು ಕಟ್ಟಿ ರಕ್ಷಣೆ ಒದಗಿಸಿ ಗಿಡ ಬಳ್ಳಿಗಳನ್ನು ಬೆಳೆಸುವನೋ, ಅದೇ ಮುತುವರ್ಜಿಯಿಂದ ಒಬ್ಬ ಗುರು ಉತ್ತಮ ವಾತಾವರಣ ಕಲ್ಪಿಸಿ, ವಿದ್ಯೆ ಮತ್ತು ಜ್ಞಾನವನ್ನು ನೀಡಿ, ಕೆಟ್ಟದರಿಂದ ರಕ್ಷಿಸಿ ತನ್ನ ವಿದ್ಯಾರ್ಥಿಗಳನ್ನು ವಿದ್ವಾಂಸರನ್ನಾಗಿ ಮತ್ತು ವಿಚಾರವಂತರನ್ನಾಗಿ ರೂಪಿಸುವನು. ಅದಕ್ಕೆ ಅಲ್ಲವೇ ನಮ್ಮ ಭಾರತೀಯ ದರ್ಶನಗಳು ಗುರುವನ್ನು ಸೃಷ್ಟಿಕರ್ತ, ಪಾಲನಕರ್ತ ಮತ್ತು ಲಯಕರ್ತರಿಗೆ ಸಮನಾಗಿ, ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರಾ ಎಂದು ಗೌರವಿಸಿದ್ದು?

ಗುರುವಿನ ಮಹತ್ವ ಬರೀ ಭಾರತ ದೇಶಕ್ಕೆ ಸೀಮಿತವಾಗಿಲ್ಲ. ಕೊರಿಯಾದ ಹಳೆಯ ಗಾದೆಯೊಂದು ಹೇಳುವಂತೆ "Father and mother are the parents who bring me up, while a teacher is the parent who educates me". ಜಪಾನಿನ ಗಾದೆಯೊಂದು ಹೇಳುವಂತೆ "Better than a thousand days of diligent study is one day with a great teacher". ಚೈನಾದ ನಾಣ್ಣುಡಿಯೊಂದು ಹೀಗೆ ಹೇಳುತ್ತದೆ - "Teachers open the door, but you must enter by yourself". ನಮ್ಮ ಕನ್ನಡದ ಗಾದೆ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಗುರುವಿನ ಮಹತ್ವವನ್ನು ಬಣ್ಣಿಸುತ್ತದೆ. ತಮ್ಮ ಕಷ್ಟ-ಕಾರ್ಪಣ್ಯಗಳನ್ನೆಲ್ಲ ಬದಿಗೊತ್ತಿ ತಮ್ಮ ವಿದ್ಯಾರ್ಥಿಗಳಿಗೆ ದಾರಿ-ದೀಪ ತೋರುವ ವಿಶ್ವದ ಎಲ್ಲ ಗುರು-ವೃಂದಕ್ಕೆ ನಾವು ಸದಾ ಆಭಾರಿಗಳು.

## ತಿಂಗಳ ವ್ಯಕ್ತಿ : ವರಕವಿ ಡಾ| ದ.ರಾ.ಬೇಂದ್ರೆ



"ಬಾರೋ ಸಾಧನ ಕೇರಿಗೆ" ಎಂದು ಕರೆದು ಉತ್ಕೃಷ್ಟ ಕಾವ್ಯವನ್ನು ಉಣಬಡಿಸಿದವರು ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ದ.ರಾ.ಬೇಂದ್ರೆ). "ಉತ್ತರಧೃವದಿಂ ದಕ್ಷಿಣ ಧ್ರುವಕು", "ಮುಗಿಲ ಮಾರಿಗೆ ರಾಗ ರತಿಯ", "ನೀ ಹಿಂಗ ನೋಡಬ್ಯಾಡ ನನ್ನ..", "ಅನಂತದಿಂ ದಿಗಂತದಿಂ..", "ಇಳಿದು ಬಾ ತಾಯಿ ಇಳಿದು ಬಾ..", "ಯುಗ ಯುಗಾದಿ ಕಳೆದರೂ.." ಹೀಗೆ ನೂರಾರು ಎಂದೂ ಮರೆಯದ ಕವನಗಳನ್ನು ಬರೆದ ಹೆಗ್ಗಳಿಕೆ ಅವರದು. ಕರಿ ಟೋಪಿ, ಕೋಟು, ಬಿಳಿಯ ಧೋತಿ ತೊಟ್ಟು ಪುಸ್ತಕ ಹಿಡಿದು ಮೈಕ್ ಮುಂದೆ ನಿಂತರೆಂದರೆ, ನೆರೆದಿದ್ದವರಿಗೆ ಕಾವ್ಯದ ಹಬ್ಬ ಶುರುವಾಯಿತೆಂದರ್ಥ. "ನಾನು ಬಡವಿ , ಆತ ಬಡವ, ಒಲವೆ ನಮ್ಮ ಬದುಕು" ತರಹದ ಕವನಗಳಲ್ಲಿ ಬದುಕಿನ ಕ್ಲಿಷ್ಟವಾದ ಪದರಗಳನ್ನು ತಮ್ಮ ಸರಳ ಭಾಷೆ ಮತ್ತು ಪದಗಳಲ್ಲಿ ಸುಲಿದಿಡುತ್ತಿದ್ದರು. ಕನ್ನಡ ಸಾಹಿತ್ಯದಲ್ಲಿ ನವೋದಯದ ಸಂಚಲನೆ ಶುರುವಾದಾಗ ಅದಕ್ಕೆ ತಮ್ಮ ಮಧುರ ಕಾವ್ಯದಿಂದ ತಂಗಾಳಿ ಬೀಸಿದವರು ಬೇಂದ್ರೆ. ಸಾಹಿತಿಗಳು ಮತ್ತು ಸಹ ಚಿಂತಕರನ್ನು ಒಗ್ಗೂಡಿಸಿ "ಗೆಳೆಯರ ಗುಂಪು" ಕಟ್ಟಿ ವಿಶಿಷ್ಟ ಶೈಲಿಯಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಗೆ ನೀರೆರೆದರು. ಬದುಕಿಗೆ ತಮ್ಮದೇ ಅರ್ಥ ಮತ್ತು ತತ್ವವನ್ನು ಅಳವಡಿಸಿಕೊಂಡಿದ್ದ ಬೇಂದ್ರೆ ಸಂಖ್ಯಾ ಶಾಸ್ತ್ರದಲ್ಲೂ ಪರಿಣಿತಿ ಮತ್ತು ಅಭಿರುಚಿ ಹೊಂದಿದ್ದರು. 38 ಕವನ ಸಂಕಲನಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವ ಬೇಂದ್ರೆ ಅವರಿಗೆ, ಅವರ "ನಾಕು ತಂತಿ" ಕವನ ಸಂಕಲನಕ್ಕೆ 1974ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರಕಿದೆ. "ಅಂಬಿಕಾತನಯದತ್ತ" ಎಂಬ ಕಾವ್ಯನಾಮದಿಂದ ಬರೆಯುತ್ತಿದ್ದ ಬೇಂದ್ರೆ, ಧಾರವಾಡದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಮಹಾರಾಷ್ಟ್ರದ ಪುಣೆಯಲ್ಲಿ ಪದವಿ ಪೂರೈಸಿದರು. ಕರ್ನಾಟಕದ ಗದುಗಿನಲ್ಲಿ ಕೆಲಕಾಲ ಮುಖ್ಯಾಧ್ಯಾಪಕರಾಗಿದ್ದರು. ಬಳಿಕ ಎಂ.ಎ. ಪದವಿ ಪಡೆದು ಧಾರವಾಡದ ವಿಕ್ಟೋರಿಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. **ಜನವರಿ ೩೧** ಬೇಂದ್ರೆಯವರ ಜನ್ಮದಿನ. ಕನ್ನಡ ಸಾಹಿತ್ಯಲೋಕದ ದಿಗ್ಗಜರಾದ ಇವರನ್ನು ಸದಾ ನೆನೆಯುವುದು ನಮ್ಮ ಕರ್ತವ್ಯವಲ್ಲವೆ? - ಗಿರೀಶ್ ಜಮದಗ್ನಿ



(ಬೇಂದ್ರೆ ಸ್ಮಾರಕ)



## ಇವರು ಯಾರು ಬಲ್ಲಿರೇನು?



ವಿದ್ಯಾದೇವಿ ಸರಸ್ವತಿಮಾತೆಯ ನೆಚ್ಚಿನ ವಾದ್ಯವನ್ನು ಮೈಸೂರು ಮಹಾರಾಜರ ಮುಂದೆ ತಮ್ಮ ೧೩ನೇ ವಯಸ್ಸಿನಲ್ಲೇ ನುಡಿಸಿ, ಮಹಾರಾಜರ ಕೃಪೆಗೆ ಪಾತ್ರರಾಗಿ, ಆಸ್ಥಾನ ವಿದ್ವಾನ್ ಆಗಿ, ತಮ್ಮದೆ ಆದ ವಿಶಿಷ್ಟ ಶೈಲಿಯಿಂದ ಜಗದ್ವಿಖ್ಯಾತರಾದ ಈ ಕನ್ನಡಿಗ, ಸಂಗೀತಗಾರ ಯಾರು?

**ಉತ್ತರ** : ಮುಂದಿನ ಸಂಚಿಕೆಯಲ್ಲಿ!

ಡಿಸೆಂಬರ್ ಸಂಚಿಕೆಯ "ಇವರು ಯಾರು ಬಲ್ಲಿರೇನು?" ಪ್ರಶ್ನೆಗೆ ಉತ್ತರಕ್ಕೆ, ಆರನೆ ಪುಟ ನೋಡಿ!

## ಹಬ್ಬ-ಹರಿದಿನ, ರಜಾ-ಮಜಾ!!




1 ನೇ ಜನವರಿ (ಭಾನುವಾರ) - ಹೊಸ ವರ್ಷಾರಂಭ (ಸಿಂಗಾಪುರದಲ್ಲಿ 2ನೇ ಜನವರಿ ರಜಾದಿನ)

5 ನೇ ಜನವರಿ (ಗುರುವಾರ)- ಗುರುಗೋವಿಂದ್ ಸಿಂಗ್ ಜಯಂತಿ

14 ನೇ ಜನವರಿ (ಶನಿವಾರ) - ಮಕರ ಸಂಕ್ರಾಂತಿ

23 ಮತ್ತು 24ನೇ ಜನವರಿ (ಸೋಮವಾರ ಮತ್ತು ಮಂಗಳವಾರ) - ಚೀನಿಯರ ವರ್ಷಾರಂಭ (ಸಿಂಗಾಪುರದಲ್ಲಿ ರಜಾದಿನಗಳು)

26 ನೇ ಜನವರಿ (ಗುರುವಾರ) - ಭಾರತದ ಗಣರಾಜ್ಯದಿನ

## ಪದ-ಪಂದ್ಯ— (ಗಿ. ಜ.)




| | |
|---|---|
| 1 ಅಡ್ಡ | ಅತ್ತಿಗೆ ಮನೆ ಕಟ್ಟಲು ಉಪಯೋಗಿಸಿದ್ದು! |
| 1 ಕೆಳಗೆ | ಹಿಮವನ್ನೂ ಕರಗಿಸುವ "ಸಾಯಿಸುತೆ" ಅವರ ಈ ಕಾದಂಬರಿ ಆಧಾರಿತ ಚಲನ ಚಿತ್ರದಲ್ಲಿ ಲಕ್ಷ್ಮಿ ನಾಯಕಿ! |
| 2 | ಬೇಂದ್ರೆಯವರ ನಾಕು ತಂತಿಯ "ಕಣ್ಣರಳು" ಕವನದ ಮೊದಲ ಸಾಲು, ಒಂದು ಚಲನ ಚಿತ್ರದ ಹೆಸರೂ ಹೌದು |
| 3 | ಮನೆ ಮುಂದೆ ಇಟ್ಕೊಂಡು ಇದನ್ನು ದಿನಾ ಬಳಸಿ ಅಂತ ನಮ್ಮ ಹಿರಿಯರು ಹೇಳ್ತಿದ್ರು |
| 4 | ರವೆಯನ್ನು ಸಾಗಿಸಿ |
| 5 ಕೆಳಗೆ | ಹಾವು ಹಿಡಿದು ಆಡಿಸುವನಲ್ಲ, ಪುಷ್ಪಗಳ ಕಟ್ಟಿ ಮಾರುವವ |
| 6 | ಕರಡಿ ಕುಸ್ತಿ ಕಲಿತದ್ದು ಇಲ್ಲೇ ಇರಬೇಕು! |
| 7 | ಕನ್ನಡ ಸಂಸ್ಕೃತಗಳೆರಡಕ್ಕೂ ಸಮಾನವಾದ ಶಬ್ದ |
| 8 | ಗೋರಂಟಿ ಮಾರುವ ಮಳಿಗೆ? |

### ಡಿಸೆಂಬರ್ ಪದ-ಪಂದ್ಯದ ಉತ್ತರ




**ತಿದ್ದುಪಡಿ** - ಡಿಸೆಂಬರ್ ತಿಂಗಳ ಪದ ಪಂದ್ಯದ “2-ಕೆಳಗೆ” ಸುಳಿವು ತಪ್ಪಾಗಿ ಮುದ್ರಿತವಾಗಿತ್ತು. ಅದು "ನಿರುಪಯುಕ್ತ ಕಾರಣ?" ಎಂದಿರಬೇಕಿತ್ತು - ಗಿ.ಜ

ಉತ್ತರ ಮುಂದಿನ ಸಂಚಿಕೆಯಲ್ಲಿ!





# ಸಂಘದ ಕಾರ್ಯಕ್ರಮಗಳ ಮುನ್ನೋಟ (Upcoming Events)

**New Year and Makara Sankranthi (Pongal) celebration get-together on 28th January 2012 @ Woodlands CC:**

Kannada Sangha (Singapore) is organizing a get- together in association with Woodlands CC IAEC on 28th January 2012 (Saturday) from 9AM to 3PM at Woodlands CC (Near Woodlands MRT) – to celebrate New Year, Makara Sankranthi (Pongal) & also to kick-start Kannada Kali Program. Various activities are planned for including Special Pongal Rangoli (lead by Shrimati Vijaya Mohan), Talent Show (for Children & Adults), Live Worshipping Cow and Calf, Community Pongal Cooking, Kannada Story Telling Competition (for children), sharing of Funniest New Year Resolution Sharing (for adults) and Lucky Draw. Breakfast & light Pongal Lunch will be provided. Kannada Sangha's 2012 Calendar will be distributed during this event. Please book your tickets now & be a part of this unique celebration! Please contact secretary@singara.org for registering to various activities or competitions.

**Other upcoming programs (please look forward to Sangha's mail for details):**

**Yakshagana** : Kannada Sangha (Singapore) and Woodlands CC jointly presents Yakshagana - Kartaviryarjuna Kalaga (**ಕಾರ್ತವೀರ್ಯಾರ್ಜುನ ಕಾಳಗ**) on 25th February 2012

**Geetha Havana**: To be performed as part of Gita Jayanthi 2011-12, on February 19th at Sri Srinivasa Perumal Temple, Serangoon Road

# ಸಂಘದ ಕಾರ್ಯಕ್ರಮಗಳ ಪಕ್ಷಿನೋಟ (Past Year's Events)

ನವೆಂಬರ್ ೨೦೧೦ರಲ್ಲಿ ೭ನೇ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನವನ್ನು ಯಶಸ್ವಿಯಾಗಿ ಆಯೋಜಿಸಿದ ನಿಮ್ಮ ಕನ್ನಡ ಸಂಘ ಅಲ್ಲಿಂದೀಚೆಗೆ, ಕಳೆದ ಒಂದು ವರ್ಷದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡಿದೆ.

ಪ್ರತೀ ವರ್ಷದಂತೆ ಸಂಘವು ಇತರ ಸಂಘ ಸಂಸ್ಥೆಗಳ ಆಯೋಜಿಸಿದ ಕಾರ್ಯಕ್ರಮಗಳಾದ SIFAS ANNUAL FESTIVAL, ರಕ್ಷಾಬಂಧನ ಹಾಗೂ ಗೀತ-ಜಯಂತಿ ಕಾರ್ಯಕ್ರಮಗಳಲ್ಲಿ ಕನ್ನಡ ಸಂಘ ಭಾಗವಹಿಸಿತ್ತು. ಆಲ್ಲದೇ ಇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಸಂಘವು ಪುರಂದರ ದಾಸರ ಆರಾಧನೆ ಹಾಗೂ ವಚನಾಂಜಲಿ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ಯಕ್ಷಗಾನ ಕಲೆಯನ್ನು ಪರಿಚಯಿಸುವ "ಅಮೋಘ ಯಕ್ಷಗಾನ" ಅರಿವು ಕಾರ್ಯಕ್ರಮ, ಮಕ್ಕಳು-ದೊಡ್ಡವರು ಒಟ್ಟಿಗೆ ನೋಡಿ ಆನಂದಿಸಿದ "ಮಕ್ಕಳ ಚಲನ ಚಿತ್ರೋತ್ಸವ" ಜನರ ಮನ ಸೆಳೆಯಿತು.

ಕನ್ನಡ ಕ್ಯಾಲೆಂಡರ್-೨೦೧೧, ಆಶು-ಪ್ರಬಂಧ ಸ್ಪರ್ಧೆ-೨೦೧೧, ಸಿಂಗನ್ನಡಿಗರ ನಿರ್ದೇಶಿಕೆ (The directory for SingannaDigas), ಸಿಂಗಾರ ಪತ್ರಿಕೆ-೨೦೧೧, ಮಾಸಿಕ ಸುದ್ದಿ ಪತ್ರಿಕೆ ಸಿಂಚನ ಹಾಗೂ ಸಿಂಗಪುರದಲ್ಲಿ ಕನ್ನಡ ಟಿ.ವಿ. ಚಾನಲ್‌ಗಳ ಬಿತ್ತರಣೆ ಪ್ರಾರಂಭ ಸಿಂಗನ್ನಡಿಗರ ವೈವಿಧ್ಯಮಯ ಅಗತ್ಯಗಳನ್ನು ನೀಗಿಸಿದೆ. ಕ್ರೀಡಾ ಕಾರ್ಯಕ್ರಮಗಳಲ್ಲಿ ಹೊಸತನ ತರುವ ಸಲುವಾಗಿ ಆಯೋಜಿಸಿದ್ದ ಬೌಲಿಂಗ್ ಸ್ಪರ್ಧೆಗೆ ಉತ್ತಮ ಪ್ರತಿಕ್ರಿಯೆ ದೊರಕಿದೆ. ಮಾರ್ಚ್‌ನಲ್ಲಿ ನಡೆದ ಸಿಂಗಾರ ಉತ್ಸವ-೨೦೧೧ ಸಿಂಗನ್ನಡಿಗ ಕಿರಿಯರ ಹಾಗೂ ಹಿರಿಯರ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯನ್ನೊದಗಿಸಿದರೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಿಂಗನ್ನಡಿಗ ಹಿರಿಯರ ಹಾಗೂ ಕಿರಿಯರನ್ನು ಗೌರವಿಸಲು "ಸಿಂಗಾರ ಪುರಸ್ಕಾರ" ಹಾಗೂ ಸಿಂಗಾರ "ಆಜೀವ ಸಾಧನ ಪುರಸ್ಕಾರ" ಪ್ರಶಸ್ತಿಗಳನ್ನು ಆಯೋಜಿಸಲಾಗಿತ್ತು.

ಯುಗಾದಿ ಪ್ರಯುಕ್ತ ಆಯೋಜಿಸಿದ "ಗಾನ ವಿನೋದ", ಕನ್ನಡದ ಮೇರು ಕವಿ ಕುವೆಂಪು ಅವರ ಶ್ರೀಮಂತ ಸಾಹಿತ್ಯವನ್ನು ಪರಿಚಯಿಸುವ "ಕುವೆಂಪು ಕಲಾ ಉತ್ಸವ", "ಗಾನ-ಗಾರುಡಿ" ಹಾಗೂ ದೀಪಾವಳಿ ಮತ್ತು ರಾಜ್ಯೋತ್ಸವದ ಪ್ರಯುಕ್ತ ಆಯೋಜಿಸಿದ್ದ "ದೀಪೋತ್ಸವ-೨೦೧೧" ಕಾರ್ಯಕ್ರಮಗಳ ಮೂಲಕ ಕಿಕ್ಕೇರಿ ಕೃಷ್ಣಮೂರ್ತಿ, ಮುದ್ದುಕೃಷ್ಣ, ರತ್ನಮಾಲಾ ಪ್ರಕಾಶ್, ಮಾಲತಿ ಶರ್ಮ, ಸಿ. ಆರ್. ಸಿಂಹ, ನಾಗರಾಜ್ ಕೋಟೆ, ರಘು ದೀಕ್ಷಿತ್, ಮಿಮಿಕ್ರಿ ದಯಾನಂದ್, ರಂಗಸ್ವಾಮಿ, ಬಿ. ಕೆ. ಸುಮಿತ್ರ, ಚಿನ್ಮಯಿ, ಆಕಾಂಕ್ಷಾ ಬಾದಾಮಿ, ಉದಯ ಜಾದೂಗಾರ್ ಹಾಗೂ ಓಷನ್ ಕಿಡ್ಸ್ ತಂಡದ ಕಲಾವಿದರು ನಮ್ಮನ್ನು ತಮ್ಮ ಗಾನ-ನೃತ್ಯ-ಹಾಸ್ಯ-ಜಾದೂಗಳ ಮೂಲಕ ರಂಜಿಸಿದರು. ೨೦೧೧ರ ಜೂನ್‌ನಲ್ಲಿ ಆಯ್ಕೆಯಾದ ಹೊಸ ಕಾರ್ಯಕಾರೀ ಸಮಿತಿ ೨೦೧೨ರಲ್ಲಿ ಇನ್ನೂ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಿದೆ. ಎಂದಿನಂತೆ ನೀವೂ ಬನ್ನಿ, ನಿಮ್ಮ ಬಂಧು-ಮಿತ್ರರನ್ನೂ ಕಾರ್ಯಕ್ರಮಕ್ಕೆ ಕರೆತನ್ನಿ, ಆನಂದಿಸಿ; ನಿಮ್ಮ ಸಂಘವನ್ನು ಬೆಳೆಸಿ.- ವರದಿ: ಸುರೇಶ ಹೆಚ್. ಸಿ.





# ಪರಿಚಯ– ವೆಂಕಟೇಶ ಮೂರ್ತಿ

ನಾನು ವೆಂಕಟೇಶ ಮೂರ್ತಿ (ವೆಂಕಿ) ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಬೆಳವಾಡಿಯವನು. ನನ್ನ ಪತ್ನಿ ಅನುಪಮ, ಪುತ್ರ ನಿಹಾರ್ ವಿ. ಹೆಗಡೆ (೧೨ ವರ್ಷ), ಪುತ್ರಿ ಸುನಿಧಿ ವಿ. ಹೆಗಡೆ (೫ ವರ್ಷ) ಹಾಗೂ ನಾನು ಕಳೆದ ೧೩ ವರ್ಷಗಳಿಂದ ಸಿಂಗಪುರದಲ್ಲಿ ವಾಸಿಸುತ್ತಿದ್ದೇವೆ. ನಾನು ಎಂ.ಎಸ್ಸಿ.(ಮೈಸೂರು ಯೂನಿವರ್ಸಿಟಿ), ಎಂ. ಟೆಕ್ (REC, ಸುರತ್ಕಲ್) ಮತ್ತು ಎಂ.ಬಿ.ಎ. (Anglia Ruskin University, UK) ಪದವೀಧರನಾಗಿದ್ದು "Cimelia Resource Recovery Pte. Ltd" ಕಂಪನಿಯ ವ್ಯವಸ್ಥಾಪಕ ನಿರ್ದೇಶಕ (Managing Director)ನಾಗಿದ್ದೇನೆ.

ನನ್ನ ಪತ್ನಿ ಅನುಪಮಳ ಹುಟ್ಟೂರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕೆರೆಕೊಪ್ಪ. ಆಕೆ ಎಂ.ಎಸ್ಸಿ.(Botany) ಮಾಡಿದ್ದಾಳೆ. ಮಲೆನಾಡಿನ ಮೂಲೆಯಲ್ಲಿ ಹುಟ್ಟಿ ಬೆಳೆದ ನಾವಿಬ್ಬರೂ ಸದಾ ಪರಿಸರ ಪ್ರೇಮಿಗಳಾಗಿದ್ದು ಅದಕ್ಕೆ ಪೂರಕವಾದ ವೃತ್ತಿಯನ್ನೇ ಆಯ್ದುಕೊಂಡೆವು. ನಮ್ಮ ಕಂಪನಿಯು E-Waste (Electronic Waste) ಅನ್ನು ಪರಿಸರಕ್ಕೆ ಹಾನಿಯಾಗದಂತೆ Recycle ಮಾಡಿ ಅದರಲ್ಲಿರುವ ಎಲ್ಲಾ ಬೆಲೆಬಾಳುವ ಲೋಹಗಳನ್ನು ಹೊರತೆಗೆಯುತ್ತದೆ. Cimelia Resource Recovery Pte. Ltdನಲ್ಲಿ ಆಗಿ ಕೆಲಸ ಮಾಡುತ್ತಿದ್ದ ಅನುಪಮ ಸುನಿಧಿಯ ಜನನದ ನಂತರ ಕೆಲಸವನ್ನು ತ್ಯಜಿಸಿ ಮಕ್ಕಳ ಪಾಲನೆ-ಪೋಷಣೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ.



ನಮ್ಮಿಬ್ಬರ ನೆಚ್ಚಿನ ಹವ್ಯಾಸ ಪ್ರವಾಸ ಹಾಗೂ ಪುಸ್ತಕಗಳನ್ನು ಓದುವುದು. ಮೊದಲಿನಿಂದಲೂ ಕನ್ನಡ ಪ್ರೇಮಿಗಳಾಗಿರುವ ನಾವಿಬ್ಬರೂ ನಮ್ಮ ಊರಿನಲ್ಲಿ ಗ್ರಂಥಾಲಯ ಸ್ಥಾಪನೆ, ಬಡ ಮಕ್ಕಳಿಗೆ ಬಟ್ಟೆ, ಪುಸ್ತಕ ಹಂಚುವುದು, ದೇವಾಲಯಗಳ ಜೀರ್ಣೋದ್ಧಾರಕ್ಕೆ ನಮ್ಮ ಯಥಾಶಕ್ತಿಯಲ್ಲಿ ತನು-ಮನ-ಧನ ಸಹಾಯ ನೀಡುತ್ತಾ ಬಂದಿದ್ದೇವೆ. ನಿಹಾರ್ NPS International Schoolನಲ್ಲಿ ೮ನೇ ತರಗತಿಯಲ್ಲಿ ಓದುತ್ತಿದ್ದಾನೆ. ಸುನಿಧಿ ಈಗ ಎಲ್.ಕೆ.ಜಿ. ಓದುತ್ತಿದ್ದಾಳೆ.

ಕಳೆದ ಹದಿನೈದು ವರ್ಷಗಳಲ್ಲಿ ನಮ್ಮ ಕನ್ನಡ ಸಂಘ ಪ್ರಗತಿಪಥದಲ್ಲಿ ಬಹುದೂರ ಸಾಗಿ ಬಂದಿದೆ. ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಮೇಲೆ ಬೆಳಕು ಬೀರುವಂತಹ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ನಡೆಸಿಕೊಂಡುಹೋಗಬೇಕೆಂಬುದೇ ನನ್ನ ಆಶಯ. ಕನ್ನಡವೇ ಸತ್ಯ, ಕನ್ನಡವೇ ನಿತ್ಯ.

# ನಮ್ಮ ಕರ್ನಾಟಕ – ಕಬಿನಿ

ಒಂದು ರಾತ್ರಿ, ಎರಡು ಹಗಲು ಕರ್ನಾಟಕ ಪ್ರವಾಸ ಮಾಡಲು ಆಸೆ ಪಡುವವರಿಗೆ ಯೋಗ್ಯವಾದ ತಾಣ ಕಬಿನಿ. ಕಬಿನಿ ನದಿಯ ದಂಡೆಯ ಮೇಲೆ ಒಂದೆರಡು ದಿವಸ ವಿಶ್ರಾಂತಿ ಪಡೆಯುವುದೆಂದರೆ ಅದಕ್ಕಿಂತ ಸಂತೋಷದಾಯಕ ಗಳಿಗೆ ಇನ್ನೊಂದಿಲ್ಲ. ಜೀಪಿನಲ್ಲಿ ಜಂಗಲ್ ಸಫಾರಿ, ಪ್ರಕೃತಿ ನಡಿಗೆ, ದೋಣಿವಿಹಾರ ಮತ್ತು ವನ್ಯಜೀವಿ ದರ್ಶನಕ್ಕೆ ಪ್ರಶಾಂತವಾದ ಮತ್ತು ಪ್ರಶಸ್ತವಾದ ಸ್ಥಳ. ಕಬಿನಿ ನದಿಯ ಉತ್ತರದಲ್ಲಿ ೬೫೦ ಚದರ ಕಿಮೀ ವ್ಯಾಪ್ತಿಯ ನಾಗರಹೊಳೆ ಅಭಯಾರಣ್ಯವಿದೆ. ಈಶಾನ್ಯದಲ್ಲಿ ೮೭೪ ಚದರ ಕಿಮೀ ವ್ಯಾಪಿಸಿರುವ ಬಂಡೀಪುರ ಮತ್ತು ೩೨೧ ಚದರ ಕಿಮೀ ವ್ಯಾಪ್ತಿಯ ಮದುಮಲೈ ಅಭಯಾರಣ್ಯಗಳು ಹಾಗೂ ನೈರುತ್ಯದಲ್ಲಿ ೩೪೫ ಚದರ ಕಿಮೀ ವ್ಯಾಪ್ತಿಯ ಕೇರಳದ ವೈನಾಡ್ ಅಭಯಾರಣ್ಯಗಳಿವೆ.  ದೋಣಿಯಲ್ಲಿ ಕುಳಿತು ಆನೆಗಳ ಹಿಂಡನ್ನು ಬಿದಿರ ಹಿನ್ನೆಲೆಯಲ್ಲಿ ನೋಡಲು ತುಂಬಾ ಚೆನ್ನಾಗಿರುತ್ತದೆ. ಒಣ ಮರಗಳ ಮೇಲೆ ಕುಳಿತ ಬೆಳ್ಳಕ್ಕಿಗಳು, ನೀರು ಕಾಗೆಗಳು, ಸ್ನೇಕ್ ಬರ್ಡ್, ಮಿಂಚುಳ್ಳಿಗಳು, ಹದ್ದುಗಳು, ಬಾತುಗಳು ಇತ್ಯಾದಿ ಹಕ್ಕಿಗಳನ್ನು ನೋಡುತ್ತಾ ಕುಳಿತರೆ ಸಮಯ ಹೋಗುವುದೇ ಗೊತ್ತಾಗುವುದಿಲ್ಲ.

ಡಿಸೆಂಬರ್ ಅಥವಾ ಜೂನ್‌ನಲ್ಲಿ ರಜೆಗಾಗಿ ಊರಿಗೆ ಹೋದಾಗ, ನೀವು ಮತ್ತು ನಿಮ್ಮ ಮನೆಯವರು, ಗೆಳೆಯರು ಮೈಸೂರಿನಿಂದ ಸುಮಾರು ೮೦ ಕಿ.ಮಿ ದೂರವಿರುವ ಕಬಿನಿಗೆ ಹೊರಡಲು ಸಿದ್ಧರಾಗಬಹುದು. ನಿಮ್ಮ ಪ್ರವಾಸ, ವಸತಿ ಸೌಕರ್ಯದ ಏರ್ಪಾಡು ಮತ್ತು ಪ್ರಕೃತಿವಾಸ ಯೋಗಕ್ಷೇಮ ನೋಡಿಕೊಳ್ಳಲು ಈಗಂತೂ ಬಹಳ ಅನುಕೂಲಗಳಿವೆ. ಕಬಿನಿ ತಟಾಕದಲ್ಲಿ ಉಳಿದುಕೊಳ್ಳುವುದಕ್ಕೆ ಒಂದಿಷ್ಟು ರೆಸಾರ್ಟ್‌ಗಳಿವೆ ಕೂಡ.  ನದಿ ಮುಖಿ ಸುಸಜ್ಜಿತ ಕಾಟೇಜುಗಳು, ಖಾಸಗಿ ಬಳಕೆಗೆ ಜಕೂಜಿ, ಈಜುಕೊಳ, ಬಾರ್, ರೆಸ್ಟೋರೆಂಟ್, ಆಯುರ್ವೇದ ಚಿಕಿತ್ಸೆಗಳು ಮುಂತಾದ ಹಲವು ಹತ್ತು ಸೌಕರ್ಯಗಳು ಒಂದೇ ಕಡೆ ಲಭ್ಯವಾಗುತ್ತದೆ. ನಿಮ್ಮ ಅನುಕೂಲಕ್ಕೆ ತಕ್ಕಂತೆ ಪ್ರವಾಸ ಕಾರ್ಯಕ್ರಮವನ್ನು ಅಣಿಮಾಡಿಕೊಡುವ ಜನರಿದ್ದಾರೆ ಈಗ. ಎಲ್ಲವನ್ನೂ ಅಂತರ್ಜಾಲದಲ್ಲೇ ಮುಂಗಡವಾಗಿ ಆಯೋಜನೆಗೊಳಿಸಬಹುದು.





# ಸಿಂಗನ್ನಡ ಸುಧೆ– ವಾಣಿ ರಾಮದಾಸ್



ಡಿಸೆಂಬರ್ ಸಂಚಿಕೆಯ "ಇವರು ಯಾರು ಬಲ್ಲಿರೇನು?" ಪ್ರಶ್ನೆಗೆ ಉತ್ತರ - ಕನ್ನಡ ಚಿತ್ರರಂಗದ ಪ್ರಸಿದ್ಧ ಹಾಗು ಸೃಜನಶೀಲ ನಿರ್ದೇಶಕರಾದ ದಿ.ಪುಟ್ಟಣ್ಣ ಕಣಗಾಲ್.

ಮೈಸೂರು ಜಿಲ್ಲೆಯ ಕಾವೇರೀ ತೀರದ ಕಣಗಾಲ್ ಹಳ್ಳಿಯ ಶುಬ್ರವೇಷ್ಠಿ ರಾಮಸ್ವಾಮಯ್ಯ ಸೀತಾರಾಮ ಶರ್ಮ-ಬೆಳೆದಂತೆ ಆದದ್ದು ಕನ್ನಡ ಚಿತ್ರರಂಗದ ಹೆಸರಾಂತ ನಿರ್ದೇಶಕ ಎಸ್.ಆರ್.ಪುಟ್ಟಣ್ಣ ಕಣಗಾಲ್. ಚಿಕ್ಕಂದಿನಲ್ಲಿ ಉದರ ನಿಮಿತ್ತಂ ಕ್ಲೀನರ್, ಡ್ರೈವರ್, ಸೇಲ್ಸ್ಮನ್ ಹಾಗೂ ಟೀಚರ್ ಆಗಿ ವಿವಿಧ ಕ್ಷೇತ್ರಗಳಲ್ಲಿ ದುಡಿದಿದ್ದರಂತೆ. ನಾಟಕದ ಗೀಳು ಚಿತ್ರರಂಗದತ್ತ ಒಲವು ಬೆಳೆಸಿತು. ದೊರೆತದ್ದು ಪಬ್ಲಿಸಿಟಿ ಬಾಯ್, ನಂತರ ಡೈಲಾಗ್ ಕೋಚ್ ಕೆಲಸ. ಈ ಸಮಯದಲ್ಲಿ ಬಿ.ಆರ್.ಪಂತುಲು ಅವರ ಪರಿಚಯವಾಯಿತು. ಪಂತುಲು ಪುಟ್ಟಣ್ಣನವರಲ್ಲಿ ಹುದುಗಿದ್ದ ಪ್ರತಿಭೆಯನ್ನು ಕಂಡು ತಮ್ಮೊಡನೆ ಸಹ-ನಿರ್ದೇಶಕರಾಗಿ ದುಡಿಯುವ ಸದವಕಾಶ ನೀಡಿದರು. ವೃತ್ತಿ ಜೀವನದ ಮೊದಲ ಚಿತ್ರ ಸ್ಕೂಲ್‌ಮಾಸ್ಟರ್. ಸ್ವಂತ ನಿರ್ದೇಶಕರಾಗಿ ಪುಟ್ಟಣ್ಣನವರ ಪ್ರತಿಭೆ ಬೆಳ್ಳಿಮೋಡದಿಂದ ಪ್ರಾರಂಭಗೊಂಡಿತು. ನಂತರದ ದಿನಗಳಲ್ಲಿ ಕನ್ನಡ ಚಿತ್ರರಂಗಕ್ಕೆ ಬೆಳ್ಳಿಯ ಧಾರೆಯನ್ನೇ ಹರಿಸಿತು.

ಪುಟ್ಟಣ್ಣ ಬಗ್ಗೆ ಯೋಚಿಸಿದಂತೆ ಅವರು ಭಾವನಾ ಜೀವಿ ಇದ್ದಿರಬಹುದೇ ಎನಿಸಿತು. ಏಕೆಂದರೆ ಅವರು ತಾವೇ ಸೃಷ್ಟಿಸಿಕೊಂಡ ಕಲಾ ಲೋಕದ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡವರು. ಕಾಲೇಜುರಂಗ, ಪಡುವಾರಹಳ್ಳಿ ಪಾಂಡವರ ಕಂಡಾಗ ಅವರು ಸ್ವಲ್ಪ ಕ್ರಾಂತಿಕಾರಿಯಾಗಿದ್ದರೇನೋ ಎನಿಸಿದರೂ ತಿರುಳಿನಲ್ಲಿ ಅವರು ಕಟ್ಟಾ ಸಂಪ್ರದಾಯವಾದಿ ಆಗಿದ್ದರೆಂದೆನಿಸುತ್ತದೆ. ಪುಟ್ಟಣ್ಣನವರ ನಿರ್ದೇಶನದಲ್ಲಿ ಮೂಡಿದ ೨೩ ಉತ್ತಮ ಚಿತ್ರಗಳು ಇಂದಿಗೂ ಕಲಾರಸಿಕರ ಮನದಲ್ಲಿ ಪವಾಡ ಮಾಡಿ ಅಚ್ಚಳಿಯದೆ ಮನದಂಗಳದಲ್ಲಿ ಉಳಿಯುವಂತೆ ಮಾಡಿದೆ.

ಒಬ್ಬ ಸಾಮಾನ್ಯ ವ್ಯಕ್ತಿಯಲ್ಲಿ ಅಡಗಿರುವ ನಟನಾ ಕೌಶಲ್ಯವನ್ನು ಹೊರತಂದು, ಆ ಪಾತ್ರಗಳನ್ನು ಕೆತ್ತಿ, ಜೀವಂತಗೊಳಿಸುವ ಕಲೆ ನಿರ್ದೇಶಕನದು. ಆ ಕಲಾ ದೇವತೆ ಒಲಿದ ರೂವಾರಿಗಳಲ್ಲಿ ಒಬ್ಬರು ಎಸ್.ಆರ್. ಪುಟ್ಟಣ್ಣ ಕಣಗಾಲ್. ಪುಟ್ಟಣ್ಣ ಒಬ್ಬ ಸ್ಟಾರ್ ಮೇಕರ್ ಆಗಿದ್ದವರು. ಸಾಮಾನ್ಯ ಪ್ರತಿಭೆಗಳನ್ನು ಸಾಣೆ ಹಿಡಿದು ಅವರಿಂದ ಮನಸೂರೆಗೊಳ್ಳುವಂತಹ ಉತ್ತಮ ಅಭಿನಯವನ್ನು ಹೊರಹೊಮ್ಮಿಸುತ್ತಿದ್ದ ಮಾಂತ್ರಿಕ. ಇದಕ್ಕೆ ನಿದರ್ಶನ ಮಿನುಗುತಾರೆ ಕಲ್ಪನಾ, ರಾಮಾಚಾರಿ ವಿಷ್ಣುವರ್ಧನ್, ರೆಬೆಲ್‌ಸ್ಟಾರ್-ನಾಗರಹಾವಿನ-ಜಲೀಲ್-ಅಂಬರೀಶ್, ನಟಭೈರವ ವಜ್ರಮುನಿ, ಮಾನಸ ಸರೋವರದ ಪದ್ಮಾವಾಸಂತಿ, ರಾಮಕೃಷ್ಣ, ಎಡಕಲ್ಲುಗುಡ್ಡದಮೇಲೆ ಚಿತ್ರದ ಚಂದ್ರಶೇಖರ್.

ಪುಟ್ಟಣ್ಣನವರು ಹೆಚ್ಚು ಒತ್ತುಕೊಟ್ಟದ್ದು ಕಾದಂಬರಿ ಆಧಾರಿತ, ಬಹುತೇಕ ಮಹಿಳಾ ಪ್ರಧಾನ ಕಥೆಗಳಿಗೆ. ಕಾದಂಬರಿಯ ಆ ನಾಯಕಿಯ ಪಾತ್ರಗಳನ್ನು ತಮ್ಮ ಚಿತ್ರಗಳಲ್ಲಿ ಜೀವಂತಗೊಳಿಸಿ, ಮರೆಯಲಾಗದ ಪಾತ್ರಗಳ ವ್ಯಕ್ತಿಗಳನ್ನು ನಮಗಿತ್ತವರು ಪುಟ್ಟಣ್ಣ. ಹೆಣ್ಣಿನ ಮನೋಭಾವನೆಗಳು ಪ್ರತಿಬಿಂಬಿಸುವ ಅವರ ಚಿತ್ರಗಳಲ್ಲಿ ಸಾಮಾಜಿಕ ಕಳಕಳಿ, ಸಂದೇಶ, ಭಾವ ಹೊರಸೂಸುವಿಕೆಗೆ ಪ್ರಾಮುಖ್ಯತೆ ಇರುತ್ತಿತ್ತು. ತಮ್ಮ ಚಿತ್ರಗಳಲ್ಲಿನ ಪಾತ್ರಗಳು ಎಲ್ಲಿಯೂ ಎಲ್ಲೆ ಮೀರದೆ ಸಹಜವಾದ ರೀತಿಯಲಿ ಜನರ ಮನ ಮುಟ್ಟುವಂತೆ ಮಾಡುತ್ತಿದ್ದರು ಪುಟ್ಟಣ್ಣ. ಪುಟ್ಟಣ್ಣನವರ ಚಿತ್ರಗಳು ಕಥೆ, ಪಾತ್ರ, ಪೋಷಣೆ, ದೃಶ್ಯ, ನಿಖರತೆ, ಸಾಹಿತ್ಯ, ಸಂಭಾಷಣೆ, ಸಂಕಲನಗಳಿಗೆ ಹೆಸರುವಾಸಿಯಾಗಿತ್ತು.

ಚಲನಚಿತ್ರ ಮಾಧ್ಯಮದಲ್ಲಿ ನಿರ್ದೇಶಕನೇ ಮುಖ್ಯ ಸೂತ್ರಧಾರಿ. ಸೃಷ್ಟಿಸಿದ ನಾನಾ ಪಾತ್ರಗಳ ಭಾವನೆಗಳನ್ನು ನಟ, ನಟಿಯರ ನಟನೆಯ ಮೂಲಕ ಜೀವ ತುಂಬಿಸುವ ಕಲಾ ಬ್ರಹ್ಮ. ಕಣಗಾಲರ ಯಾವುದೇ ಚಿತ್ರ ನೋಡಿದರೂ ಅದರಲ್ಲಿ ಬರುವ ಪಾತ್ರಗಳು ಮರೆಯದೆ ಮನದಲಿ ಉಳಿಯುವಂತಹವು. ನಾಗರಹಾವಿನ ಚಾಮಯ್ಯ ಮೇಷ್ಟ್ರು, ಓಬವ್ವ, ಜಲೀಲ. ರಂಗನಾಯಕಿಯ ರಾಮಣ್ಣ, ಎಡಕಲ್ಲುಗುಡ್ಡದ ನಂಜುಂಡ, ಶರಪಂಜರದ ಅಡುಗೆಭಟ್ಟ, ಶುಭಮಂಗಳದ ಮೂಗ ಹೀಗೆ ಕತೆಗೆ ಊರುಗೋಲಿನಂತಿದ್ದ ಸಾಮಾನ್ಯ ಪಾತ್ರಗಳು ಕೂಡ ಮನದಲಿ ನಿಲ್ಲುವಂತಹ ಸ್ಥಿರ ನೆನಪಿನ ಚಿಲುಮೆಗಳು. ಬೆಳ್ಳಿಮೋಡ, ಶರಪಂಜರ, ಕಪ್ಪು-ಬಿಳುಪು, ಉಯ್ಯಾಲೆ ಇಂದೂ ಮೆಲುಕು ಹಾಕುವಂತಿದೆ. ಉತ್ತಮ ಸದಭಿರುಚಿಯ ಚಿತ್ರಗಳ ಕಾಲವದು.

ನಿರ್ದೇಶಕನೇ ನಿಜವಾದ ಹೀರೋ ಎಂದು ಸಾಬೀತು ಪಡಿಸಿದ ಧೀಮಂತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಬದುಕಿದ್ದು ಕೇವಲ ೫೩ ವರುಷಗಳು ಮಾತ್ರವಾದರೂ ಕನ್ನಡ ಚಿತ್ರರಂಗಕ್ಕೆ ಅವರಿತ್ತ ಕೊಡುಗೆ ಅಪಾರ. ಕರ್ನಾಟಕ ಸರಕಾರವು ಪ್ರತಿ ವರ್ಷವೂ ಚಿತ್ರ ರಂಗದಲ್ಲಿ ಹೆಸರು ಮಾಡಿದವರಿಗೆ ಪುಟ್ಟಣ್ಣ ಹೆಸರಿನಲ್ಲಿ "ಪುಟ್ಟಣ್ಣ ಕಣಗಾಲ್" ಪ್ರಶಸ್ತಿ ನೀಡುತ್ತಿದೆ.

**ವಿಶೇಷ ಸೂಚನೆ:** ಸಿಂಗನ್ನಡಿಗರ ನಡುವೆ ಸಂಪರ್ಕ, ಒಡನಾಟ ಹೆಚ್ಚಿಸುವ ಪ್ರಯತ್ನವನ್ನು ಈ ಮೂಲಕ ಮಾಡುತ್ತಿದ್ದೇವೆ. ಇಲ್ಲಿರುವ ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ನಿಮ್ಮ ಲೇಖನಗಳನ್ನು ನಮಗೆ ಕಳಿಸಿ, ಹಾಗೂ ಸಲಹೆ, ಸೂಚನೆಗಳನ್ನು ತಪ್ಪದೇ ತಿಳಿಸಿ. . ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಈ ಪತ್ರಿಕೆಯಲ್ಲಿ ಆದಷ್ಟೂ ಕರಾರುವಕ್ಕಾದ ಮಾಹಿತಿಯನ್ನು ನೀಡುವ ಪ್ರಯತ್ನ ನಡೆದಿದೆ. ಅಂಕಣಗಳಲ್ಲಿ ನೀಡಿರುವ ಮಾಹಿತಿಯ ಖಚಿತತೆ ಮತ್ತು ನಿಖರತೆಗೆ ಕನ್ನಡ ಸಂಘವು ಜವಾಬ್ದಾರಿಯಲ್ಲ.